ದಿನಾಂಕಃ 25.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ-

ದೂರು ಸಲ್ಲಿಸಿದ ನಂತರ ನನ್ನ ತಂದೆ ಉಡುಪಿಯ ಮಣಿಪಾಲ್ ಆಸ್ಪತ್ರೆಗೆ ನನ್ನ ತಂಗಿಯನ್ನು ದಾಖಲಿಸಿದ್ದರು. ನನ್ನ ತಂಗಿ ಮಣಿಪಾಲ್ ಆಸ್ಪತ್ರೆಯಲ್ಲಿ ಮರಣಹೊಂದಿದಳು. ವರದಕ್ಷಿಣೆ ಕಿರುಕುಳದಿಂದ ನನ್ನ ತಂಗಿ ಮರಣ ಹೊಂದಿದ್ದಾಳೆಂದು ದೂರು ಸಲ್ಲಿಸಿದೆವು. ಪೋಲೀಸರು ಆರೋಪಿತರನ್ನು ದಸ್ತಗಿರಿ ಮಾಡಿದ್ದರು. ನನ್ನ ತಂಗಿ ಮರಣಹೊಂದಿದ ಒಂದು ತಿಂಗಳ ನಂತರ ಪೋಲೀಸರು ನನ್ನನ್ನು ಮೂಡಿಗೆರೆ ಠಾಣೆಗೆ ಕರೆದಿದ್ದರು. ನಾನು ಪೋಲೀಸರಲ್ಲಿ ನನ್ನ ತಂಗಿ ವರದಕ್ಷಿಣೆ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ದೂರು ಸಲ್ಲಿಸಿದ್ದೇನೆ.

ಈಗ ನೋಡುತ್ತಿರುವ ಸ್ಥಳ ಮಹಜರಿನಲ್ಲಿ ನನ್ನ ಸಹಿ ಇದ್ದು, ಸಾಕ್ಷಿ ಗುರುತಿಸಿದ ಮಹಜರನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ನಿಪಿ.3 ಮಹಜರಿಗೆ ಆರೋಪಿತರ ಮನೆಯಲ್ಲಿ ಪೋಲೀಸರು ಮಹಜರು ಮಾಡಿದಾಗ ಸಹಿ ಮಾಡಿದ್ದೇನೆ. ಅದೇ ದಿನ ಪೋಲೀಸರು ಸಂಗ್ರಹಿಸಿದ ಛಾಯಚಿತ್ರವನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ.4 ರಿಂದ 6 ಎಂದು ಗುರುತಿಸಲಾಯಿತು. ನಿಪಿ.4 ರಿಂದ 6 ರ ಛಾಯಚಿತ್ರದಲ್ಲಿ ಚಾಸಾ.4 ರಿಂದ 6 ರವರು ಇದ್ದಾರೆ.

ನಾನು ಮೂಡಿಗೆರೆ ನ್ಯಾಯಾಲಯದಲ್ಲಿ ಹೇಳಿಕೆಯೊಂದನ್ನು ನೀಡಿದ್ದೇನೆ. (ಸಾಕ್ಷಿಯ ಸಿ.ಆರ್.ಪಿ.ಸಿ.ಯ ಕಲಂ.164 ರಡಿಯಲ್ಲಿನ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡುಲಾಯಿತು) ಮೂಡಿಗೆರೆ ನ್ಯಾಯಾಲಯದಲ್ಲಿ ನೀಡಿದ

ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.7 ಎಂದು ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯಲ್ಲಿ ನನ್ನ ತಂಗಿಗೆ ಆರೋಪಿತರು ವರದಕ್ಷಿಣೆ ಕಿರುಕುಳ ನೀಡಿದ್ದರು ಎಂದು ಹೇಳಿದ್ದೇನೆ.

<u>ಪಾಟೀ ಸವಾಲುಃ ಶ್ರೀ ಪಿ.ಇ.ಎಸ್., ವಕೀಲರಿಂದ, ಆರೋಪಿ ಪರವಾಗಿ</u>

ನಾವು ಒಕ್ಕಲಿಗ ಜನಾಂಗದವರಾಗಿದ್ದು ನಮ್ಮ ಜನಾಂಗದಲ್ಲಿ ಮದುವೆ ಕಾಲಕ್ಕೆ ಮದುಮಕ್ಕಳಿಗೆ ಒಡವೆ ವಸ್ತ್ರಾಭರಣಗಳನ್ನು ಉಡುಗೊರೆಯಾಗಿ ಕೊಡುವ ಸಂಪ್ರದಾಯವಿದೆ. ನನ್ನ ತಂಗಿ ರುತುಮತಿಯಾದಾಗ ಅವಳ ಭವಿಷ್ಯಕ್ಕಾಗಿ ಒಡವೆಗಳನ್ನು ಖರೀದಿಸಲಾಗಿತ್ತು. ನನ್ನ ತಂಗಿಗೆ ಭವಿಷ್ಯಕ್ಕಾಗಿ ನೀಡಲಾದ ಒಡವೆಗಳನ್ನು ಮದುವೆ ಕಾಲದಲ್ಲಿ ಬಳುವಳಿಯಾಗಿ ನೀಡಲಾಗಿತ್ತು ಎಂದರೆ ಸರಿ. ಬೇರೆ ಒಡವೆಗಳನ್ನು ಮೃತಳಿಗೆ ನೀಡಿರಲಿಲ್ಲ ಎಂದರೆ ನಿಜ.

ಮದುವೆ ಪೂರ್ವದಲ್ಲಿ ಮಾತುಕತೆ ನಡೆಯಿತು, ಆನಂತರ ನಿಶ್ಚಿತಾರ್ಥ ನಡೆಯಿತು. ಮಾತುಕತೆ ಸಮಯದಲ್ಲಿ ನಮ್ಮ ಅಂತಸ್ತಿಗೆ ಸರಿಯಾಗಿ ಮದುವೆ ನಡೆಸಬೇಕು ಎಂದು ಗುರುಹಿರಿಯರು ನಿಶ್ಚಯಿಸಿದ್ದರು. ಮದುವೆ ನಿಶ್ಚಿತಾರ್ಥದ ಸಮಯದಲ್ಲಿ ಆರೋಪಿತರು ಯಾವುದೇ ಬೇಡಿಕೆ ಇಟ್ಟಿರುವುದಿಲ್ಲ ಎಂದರೆ ನಿಜ. ಮದುವೆಯ ನಂತರ ಕೂಡ ಆರೋಪಿತರು ಯಾವುದೇ ವರದಕ್ಷಿಣೆಗಾಗಿ ಬೇಡಿಕೆ ಇಟ್ಟಿರುವುದಿಲ್ಲ ಎಂದರೆ ನಿಜ.

ಮೃತಳಿಗೆ ರುತುಮತಿಯಾದ ದಿನದಿಂದಲೂ ದೈಹಿಕ ಹಾಗೂ ಮಾನಸಿಕ ಸಮಸ್ಯೆ ಇತ್ತು ಎಂದರೆ ನಿಜ. ಅವಳಿಗೆ ಋತುಚಕ್ರದ ಸಮಸ್ಯೆ ಮೊದಲಿನಿಂದಲೂ ಇತ್ತು ಎಂದರೆ ನಿಜ. ಮೃತಳು ಮಾನಸಿಕ ಆಘಾತಕ್ಕೊಳಗಾಗಿದ್ದಳು ಎಂದರೆ ನಿಜ. ನಾವು ಮೃತಳ ದೈಹಿಕ

ಮಾನಸಿಕ ಸಮಸ್ಯೆಯನ್ನು ಮುಚ್ಚಿಟ್ಟು ಆಕೆಯ ಮದುವೆಯನ್ನು 1 ನೇ ಆರೋಪಿಯೊಂದಿಗೆ ಮಾಡಿದೆವು ಎಂದರೆ ನಿಜ.

ಮೃತಳಿಗೆ ಶಿವಮೊಗ್ಗದ ಮಾನಸ ಮಾನಸಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿದ್ದೆವು ಎಂದರೆ ನಿಜ. ಮದುವೆಯ ನಂತರ ಮೃತಳಿಗೆ ಗಂಡನೊಂದಿಗೆ ದೈಹಿಕವಾಗಿ ಸೇರಲು ಆಗುತ್ತಿರಲಿಲ್ಲ ಎಂದರೆ ನಿಜ. 1 ನೇ ಆರೋಪಿ ಮೃತಳನ್ನು ಬೇರೆ ಬೇರೆ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದಾನೆ ಎಂದರೆ ನಿಜ. ಆದರೂ ಮೃತಳು ಮಾನಸಿಕ ಆಘಾತದಿಂದ ಚೇತರಿಸಿಕೊಂಡಿರಲಿಲ್ಲ ಎಂದರೆ ಸರಿ. ಮೃತಳ ಆರೋಗ್ಯ ಸಮಸ್ಯೆ ಚಿಕಿತ್ಸೆಯ ನಂತರವೂ ಉಲ್ಬಣಗೊಂಡಿತ್ತು ಎಂದರೆ ನಿಜ. ಮೃತಳಿಗೆ ಎಲ್ಲರಂತೆ ಬೆಳಿಗ್ಗೆ ಎದ್ದು ದಿನಂಪ್ರತಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಲಾಗುತ್ತಿರಲಿಲ್ಲ ಎಂದರೆ ನಿಜ.

ಮೃತಳಿಗೆ ಆರೋಪಿತನೂ ವರದಕ್ಷಿಣೆಗಾಗಿ ದೈಹಿಕ ಹಾಗೂ ಮಾನಸಿಕ ಕಿರುಕುಳ ಕೊಟ್ಟಿಲ್ಲ ಎಂದರೆ ನಿಜ. ನಾನು ಆಸ್ಪತ್ರೆಯಲ್ಲಿ ನೋಡುವ ಮೊದಲೇ ಮೃತಳು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ನಿಜ. ಮೃತಳಿಗೆ ಆರೋಪಿತರೇ ಮರಣಪೂರ್ವದಲ್ಲಿ ಸಾಕಷ್ಟು ಚಿಕಿತ್ಸೆ ನೀಡಿದರು ಎಂದರೆ ನಿಜ. ಮೃತಳ ದೇಹಕ್ಕೆ ವಿಷ ಸೇರಿದ್ದರಿಂದ ಆರೋಪಿತರು ಅವಳಿಗೆ ಚಿಕಿತ್ಸೆ ಕೊಡಿಸಿದರು ಎಂದರೆ ನಿಜ. ಆರೋಪಿತರು ಮಣಿಪಾಲ್ ಆಸ್ಪತ್ರೆಯಲ್ಲಿನ ಮೃತಳ ವೆಚ್ಚವನು ಭಾಗಶಃ ಭರಿಸಿದ್ದಾರೆ ಎಂದರೆ ನಿಜ. ನನ್ನ ತಂಗಿ ಮರಣಹೊಂದಿದ ನೋವಿನಲ್ಲಿ ಪೋಲೀಸರು ತಯಾರಿಸಿದ ದೂರಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ನಿಜ. ನಿಪಿ.1 ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

ನಾನು ಪೋಲೀಸರು ತಯಾರಿಸಿದ ದೂರಿನ ಆಧಾರದ ಮೇಲೆ ಮತ್ತು ಪೋಲೀಸರು ನೀಡಿದ ಮಾಹಿತಿಯ ಮೇರೆಗೆ ಪೋಲೀಸರಿಂದ ತೊಂದರೆ ಆಗಬಹುದು ಎಂದು ಗ್ರಹಿಸಿ ನ್ಯಾಯಾಧೀಶರ ಮುಂದೆ

ಹೇಳಿಕೆ ನೀಡಿದ್ದೇನೆ ಎಂದರೆ ನಿಜ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಘಟನೆ ನಡೆದಿರುವುದಿಲ್ಲ ಎಂದರೆ ನಿಜ. ಪೋಲೀಸರು ಹೇಳಿಕೊಟ್ಟ ಮೇರೆಗೆ ನಾನು ಮುಖ್ಯ ವಿಚಾರಣೆ ಸಾಕ್ಷ್ಯ ನುಡಿದಿದ್ದೇನೆ ಎಂದರೆ ನಿಜ. ಮರಣ ಹೊಂದುವ ಮೊದಲು ನನ್ನ ತಂಗಿಯನ್ನು ಆರೋಪಿತರು ಚೆನ್ನಾಗಿ ನೋಡಿಕೊಂಡಿದ್ದರು ಎಂದರೆ ನಿಜ. ಪೋಲೀಸರ ಕೋರಿಕೆಯ ಮೇರೆಗೆ ನಿಪಿ.3 ಮಹಜರಿಗೆ ಸಹಿ ಮಾಡಿದ್ದೇನೆ ಎಂದರೆ ನಿಜ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಮಂಜುನಾಥ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ